**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-15)**

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(3) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,-

(i) "ಹದಿನೈದು" ಎಂಬ ಪದಕ್ಕೆ "ಹದಿನೇಳು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (ಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿದ ವೈದ್ಯಕೀಯ ವೃತ್ತಿನಿರತರ ಪೈಕಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಪ್ರತಿಯೊಂದು ವಿಭಾಗದಿಂದ ತಮ್ಮೊಳಗೆ ಚುನಾಯಿಸಿದ ಇಬ್ಬರು ಸದಸ್ಯರು;"

(iii) (ಬಿ) ಖಂಡದಲ್ಲಿ "ತಮ್ಮೊಳಗೆ ಚುನಾಯಿಸಿದ" ಎಂಬ ಪದಗಳಿಗೆ ಮೊದಲು "ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iv) (ಸಿ) ಖಂಡದಲ್ಲಿ "ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ" ಎಂಬ ಪದಗಳಿಗೆ ಮೊದಲು "ಪ್ರತಿಯೊಂದು ಕಂದಾಯ ವಿಭಾಗದಿಂದ ಒಬ್ಬರಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. 19ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 19ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"19. ನೋಂದಣಿಯ ನವೀಕರಣ.-** (1) ಪ್ರತಿಯೊಬ್ಬ ವೈದ್ಯಕೀಯ ವೃತ್ತಿನಿರತನು ವೈದ್ಯಕೀಯ ಪರಿಷತ್ತಿಗೆ ನಿಯಮಿಸಿದ ಶುಲ್ಕವನ್ನು ಪಾವತಿಸುವ ಮೂಲಕ ಐದು ವರ್ಷಗಳಿಗೊಮ್ಮೆ ತನ್ನ ನೋಂದಣಿಯನ್ನು ನವೀಕರಿಸತಕ್ಕದ್ದು. ನೋಂದಣಿಯ ನವೀಕರಣಕ್ಕಾಗಿ ಅಂಥ ಅರ್ಜಿದಾರನು ತಾನು ಕರ್ನಾಟಕ ವೈದ್ಯಕೀಯ ಪರಿಷತ್ತು ಈ ನಿಟ್ಟಿನಲ್ಲಿ ಅನುಮೋದಿಸಿದ ಯಾವುದೇ ವೈದ್ಯಕೀಯ ಸಮ್ಮೇಳನ ಅಥವಾ ವಿಚಾರಸಂಕಿರಣ ಅಥವಾ ಕಾರ್ಯಾಗಾರ ಅಥವಾ ಮುಂದುವರಿಕೆ ವೈದ್ಯಕೀಯ ಶಿಕ್ಷಣಗಳಲ್ಲಿ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ ಆರು ಪ್ರಶಂಸಾರ್ಹ ಗಂಟೆಗಳಿಗೆ ಕಡಿಮೆಯಲ್ಲದಂತೆ ವೈದ್ಯಕೀಯ ಶಿಕ್ಷಣ ಮುಂದುವರಿಕೆ ಕಾರ್ಯಕ್ರಮದ ಕನಿಷ್ಠ ಮೂವತ್ತು ಪ್ರಶಂಸಾರ್ಹ ಗಂಟೆಗಳು (credit hours) (ಒಂದು ಪ್ರಶಂಸಾರ್ಹ ಗಂಟೆ = ಮುಂದುವರಿಕೆ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದ ನಾಲ್ಕು ಗಂಟೆಗಳು) ಭಾಗವಹಿಸಿರುವುದಕ್ಕೆ ಅಥವಾ ಹಾಜರಾಗಿರುವುದಕ್ಕೆ ಸಾಕ್ಷ್ಯದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ತನ್ನ ನೊಂದಣಿಯನ್ನು ನವೀಕರಿಸಲು ವಿಫಲನಾದ ವೈದ್ಯಕೀಯ ವೃತ್ತಿನಿರತನು 13ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಆತನು ನೋಂದಾಯಿತ ವೃತ್ತಿನಿರತನಾಗಿರುವುದು ನಿಂತುಹೋಗತಕ್ಕದ್ದು, ರಿಜಿಸ್ಟ್ರಾರ್‌ನು 12ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸುತ್ತಿರುವ ರಿಜಿಸ್ಟರ್‌ನಿಂದ ಅಂಥ ವೃತ್ತಿನಿರತನ ಹೆಸರನ್ನು ತೆಗೆದುಹಾಕತಕ್ಕದ್ದು:

ಪರಂತು, ನಿಯಮಿಸಬಹುದಾದ ಅಂಥ ವೈದ್ಯಕೀಯ ವೃತ್ತಿನಿರತರ ಸಂದರ್ಭದಲ್ಲಿ ಅಂಥ ಮುಂದುವರಿಕೆ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಅಗತ್ಯವಾಗಿರತಕ್ಕದ್ದಲ್ಲ.

ಮತ್ತು ಪರಂತು, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅಂಥ ವಿಧಾನದಲ್ಲಿ ನವೀಕರಣ ಶುಲ್ಕವನ್ನು ಪಾವತಿಸಿದ ಮೇಲೆ ಮತ್ತು ಮುಂದುವರಿಕೆ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಒಳಪಟ್ಟು, ಹಾಗೆ ತೆಗೆದುಹಾಕಲಾದ ಹೆಸರನ್ನು ರಿಜಿಸ್ಟರ್‌ನಲ್ಲಿ ಪುನ: ನಮೂದಿಸಬಹುದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ "ಸಿಎಂಇ" ಎಂದರೆ, ಮುಂದುವರಿಕೆ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ ಅಥವಾ ರಾಜ್ಯದ ಕೇಂದ್ರಸ್ಥಳದಲ್ಲಿ ಅಥವಾ ಪ್ರಾದೇಶಿಕ ಸ್ಥಳದಲ್ಲಿ ಅಥವಾ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಅಥವಾ ಬೋಧನಾ ಆಸ್ಪತ್ರೆಗಳಲ್ಲಿ ಅಥವಾ ವೈದ್ಯಕೀಯ ಕಾಲೇಜುಗಳಲ್ಲಿ ಅಥವಾ ಕರ್ನಾಟಕ ವೈದ್ಯಕೀಯ ಪರಿಷತ್ತು ನಡೆಸುವ ಯಾವುದೇ ಸಂಸ್ಥೆಗಳಲ್ಲಿ ವೈದ್ಯಕೀಯ ಪರಿಷತ್ತು ಅನುಮೋದಿಸಬಹುದಾದ ಅಥವಾ ನಡೆಸಬಹುದಾದ ಮಾನ್ಯತೆ ಪಡೆದ ವೈದ್ಯಕೀಯ ಸಮ್ಮೇಳನ ಅಥವಾ ವಿಚಾರ ಸಂಕಿರಣ ಅಥವಾ ಕಾರ್ಯಗಾರ".

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಖಾಸಗಿ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ 34) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ :–

(i) ನೋಂದಣಿಯನ್ನು ನವೀಕರಿಸುವ ಮೊದಲು ಮುಂದುವರಿಕೆ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ವೈದ್ಯಕೀಯ ವೃತ್ತಿನಿರತರಲ್ಲಿ ಜ್ಞಾನ ಅಥವಾ ಕೌಶಲ್ಯಗಳ ಕುರಿತು ನಿರಂತರ ಹೊಸತನದ ಕಲಿಕೆಯನ್ನು (continuous updation) ಖಚಿತಪಡಿಸಿಕೊಳ್ಳುವುದು;

(ii) ಕರ್ನಾಟಕ ವೈದ್ಯಕೀಯ ಪರಿಷತ್ತಿನಲ್ಲಿ ರಾಜ್ಯದ ಎಲ್ಲ ನಾಲ್ಕು ಕಂದಾಯ ವಿಭಾಗಗಳ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳುವುದು; ಮತ್ತು

(iii) ನಿಯಮಿಸಬಹುದಾದ ಅಂಥ ಶುಲ್ಕವನ್ನು ಪಾವತಿಸಿದ ಮೇಲೆ ವೈದ್ಯಕೀಯ ವೃತ್ತಿನಿರತರ ನೋಂದಣಿಯನ್ನು ನವೀಕರಿಸುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ**

| | | |
|---|---|---|
| **ಖಂಡ 3:** | | 3ನೇ ಖಂಡದ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ 19ನೇ ಪ್ರಕರಣದಲ್ಲಿ,- |
| | (i) | (1)ನೇ ಉಪಪ್ರಕರಣವು ಪ್ರತಿಯೊಬ್ಬ ವೈದ್ಯಕೀಯ ವೃತ್ತಿನಿರತನು ಐದು ವರ್ಷಗಳಿಗೊಮ್ಮೆ ನೋಂದಣಿಯನ್ನು ನವೀಕರಿಸುವುದಕ್ಕಾಗಿ ಶುಲ್ಕವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| | (ii) | (2)ನೇ ಉಪಪ್ರಕರಣದ ಪರಂತುಕವು, ಕೆಲವು ವೈದ್ಯಕೀಯ ವೃತ್ತಿನಿರತರಿಗೆ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ವಿನಾಯಿತಿಯನ್ನು ನೀಡುವುದಕ್ಕೆ ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಡಾ. ಶರಣಪ್ರಕಾಶ್ ಆರ್. ಪಾಟೀಲ್**
ವೈದ್ಯಕೀಯ ಶಿಕ್ಷಣ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರ
### (1961ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

**XX XX XX**

**3. ಕೌನ್ಸಿಲ್‌ನ ಸ್ಥಾಪನೆ, ನಿಯಮಿತಗೊಳಿಸುವಿಕೆ ಮತ್ತು ರಚನೆ.– (1) XX XX XX**

(2) ಪರಿಷತ್ತು ಈ ಮುಂದಿನ ಹದಿನೈದು ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ :–

(ಎ) ಈ ಅಧಿನಿಯಮದ ಅಡಿಯಲ್ಲಿ ನೊಂದಾಯಿಸಿದ ವೈದ್ಯಕೀಯ, ವೃತ್ತಿನಿರತರು ತಮ್ಮ ಪೈಕಿ ಚುನಾಯಿಸಿದ ಆರು ಸದಸ್ಯರು ;

(ಬಿ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1994ರ (1994ರ ಕರ್ನಾಟಕ ಅಧಿನಿಯಮ 44) 2ನೇ ಪ್ರಕರಣದ (ಎಂ) ಮತ್ತು (ಎನ್) ಖಂಡಗಳಲ್ಲಿ ಅನುಕ್ರಮವಾಗಿ ಪರಿಭಾಷಿಸಿದಂತೆ "ಅಧ್ಯಾಪಕರು" ಮತ್ತು "ವಿಶ್ವವಿದ್ಯಾಲಯದ ಅಧ್ಯಾಪಕರು" ಹಾಗೂ ಈ ಅಧಿನಿಯಮದ ಅಡಿಯಲ್ಲಿ ನೊಂದಾಯಿಸಿದವರ ಪೈಕಿ ತಮ್ಮೊಳಗೆ ಚುನಾಯಿಸಿದ ನಾಲ್ಕು ಸದಸ್ಯರು;

(ಸಿ) ನೊಂದಾಯಿತ ವೃತ್ತಿ ನಿರತದಾರರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ನಾಲ್ಕು ಸದಸ್ಯರು;

**XX XX XX**

**19. ನೋಂದಣಿಯ ನವೀಕರಣ.–** (1) 13ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಬ್ಬ ವೈದ್ಯಕೀಯ ನಿರತನು ರಿಜಿಸ್ಟರ್‌ನಲ್ಲಿ ಆತನ ಹೆಸರು ಮುಂದುವರಿಯುವುದಕ್ಕಾಗಿ ನಿಯಮಿಸಬಹುದಾದ ಅಂಥ ದಿನಾಂಕದಂದು ಅಥವಾ ಮುಂಚಿತವಾಗಿ ನಿಯಮಿಸಲಾದ ಶುಲ್ಕವನ್ನು ವೈದ್ಯಕೀಯ ಕೌನ್ಸಿಲ್‌ಗೆ ಪಾವತಿಸತಕ್ಕದ್ದು:

ಪರಂತು ವೈದ್ಯಕೀಯ ವೃತ್ತಿ ನಿರತನು ವೈದ್ಯಕೀಯ ಪರಿಷತ್ತಿನಿಂದ ಪರಿಗಣಿಸಿದ ಒಂದು ಸಂಸ್ಥೆ ಅಥವಾ ಶೈಕ್ಷಣಿಕ ಸಂಸ್ಥೆಯು ನಡೆಸಿದ ಒಂದು ನೂರು ಗಂಟೆಗಳಿಗಿಂತ ಕಡಿಮೆಯಲ್ಲದ ವೈದ್ಯಕೀಯ ಶಿಕ್ಷಣ ಮುಂದುವರಿಕೆ ಕಾರ್ಯಕ್ರಮದಲ್ಲಿ ಹಾಜರಾಗಿರುವುದಕ್ಕೆ ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಹೊರತು ನೋಂದಣಿಯ ನವೀಕರಣವನ್ನು ಮಾಡತಕ್ಕದ್ದಲ್ಲ.

(2) ಯುಕ್ತ ದಿನಾಂಕಕ್ಕೂ ಮೊದಲು ನವೀಕರಣ ಶುಲ್ಕವನ್ನು ಪಾವತಿಸದಿದ್ದಲ್ಲಿ, ರಿಜಿಸ್ಟ್ರಾರ್‌ನು ರಿಜಿಸ್ಟರ್‌ನಿಂದ ಬಾಕಿದಾರನ ಹೆಸರನ್ನು ತೆಗೆದುಹಾಕತಕ್ಕದ್ದು;

ಪರಂತು ಹಾಗೆ ತೆಗೆದುಹಾಕಲಾದ ಹೆಸರನ್ನು ನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ನವೀಕರಣ ಶುಲ್ಕದ ಪಾವತಿಯ ಮೇರೆಗೆ ರಿಜಿಸ್ಟರ್‌ನಲ್ಲಿ ಪುನ: ಸೇರಿಸಬಹುದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪ್ರ.7, ಕಾಸೂ , 1169–ಪ್ರತಿಗಳು 1000, 22ನೇ ಮಾರ್ಚ್, 2017

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**THIRTEENTH SESSION**
**(Adjourned Meetings)**

# THE KARNATAKA MEDICAL REGISTRATION (AMENDMENT) BILL, 2017
**(L.A. Bill No. 15 of 2017)**

A Bill further to amend the Karnataka Medical Registration Act, 1961.

Whereas, it is expedient further to amend the Karnataka Medical Registration Act, 1961 (Karnataka Act 34 of 1961) for the purposes hereinafter appearing;

Be it enacted by the Karnataka State Legislature in the sixty-eighth year of the Republic of India as follows:-

**1. Short title and commencement.-** (1) This Act may be called the Karnataka Medical Registration (Amendment) Act, 2017.

(2) It shall come into force at once.

**2. Amendment of section 3.-** In the Karnataka Medical Registration Act, 1961 (Karnataka Act 34 of 1961) (hereinafter referred to as the principal Act), in section 3 in sub-section (2),-

(i) for the word "fifteen", the word "seventeen" shall be substituted;

(ii) for clause (a), the following shall substituted, namely:-

"(a) two members from each of the four Revenue Divisions of the State to be elected from amongst themselves by the Medical Practitioners who are registered under this Act;"

(iii) in clause (b), after the words "four members", the words "one from each of the Revenue Division" shall be inserted, and

(iii)in clause (c), after the words "four members" the words "one from each of the Revenue Division" shall be inserted.

**3. Substitution of section 19.-** For section 19 of the principal Act, the following shall be substituted, namely:-

"**19. Renewal of Registration.-** (1) Every Medical practitioner shall once in five years renew his registration by paying prescribed fees to the medical Council. For renewal of registration such applicant shall submit his application in such manner along with the evidence to the effect that he has participated or attended to a minimum of thirty credit hours of continued Medical Education Programme (one credit hour = four hours of continued Medical Education Programme) not less than six credit hours per year over a period preceding five years in any recognized Medical Conference or Seminar or Workshop or Continued Medical Education approved in this behalf by the Karnataka Medical Council.

(2) The Medical Practitioner who fails to renew his registration under sub-section (1) shall cease to be a registered practitioner under sub-section (1) of section 13, the Registrar shall remove the name of such practitioner from the Register maintained under section 12:

Provided that participation in such continued Medical Educational Programme shall not be necessary in respect of such class of Medical Practitioners as may be prescribed.

Provided further that the name so removed may be re-entered in the register on payment of the renewal fee in such manner and subject to undergoing continued Medical Education Programme specified in sub-section(1).

**Explanation.-** For the purpose of the section "CME" means a Continued Medical Education Programme or recognized medical conference or seminar or workshop as may be approved or conducted by the medical Council in the State headquarters or regional headquarters or district headquarters or teaching hospitals or medical colleges or any institution run by the Karnataka Medical Council."

## STATEMENT OF OBJECTS AND REASONS

It is considered necessary to amend the Karnataka Medical Registration Act, 1961 (Karnataka Act 34 of 1961) to,-

(i) ensure continuous updation of knowledge or skills among the medical practitioners by undergoing continued medical education programme before renewal of registration;

(ii) ensure representation of all the four revenue regions of the State in the Karnataka Medical Council; and

(iii) renewal of registration for medical practitioners on payment of such fee as may be prescribed.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

**Clause 3:** In section 19 sought to be substituted by clause 3,-

(i) sub-section (1), empowers the State Government to prescribe by rules the fee for renewal of registration to every medical practitioner once in five years; and

(ii) proviso to sub-section (2), empowers the State Government to prescribe by rules to give exemption to certain medical practitioners from participation in continued medical education programme.

The proposed delegation of legislative power is normal in Character.

**DR. SHARANAPRAKASH R. PATIL**
Minister for Medical Education

**S. Murthy**
Secretary (I/C)
Karnataka Legislative Assembly

## ANNEXURE

### EXTRACT FROM THE KARNATAKA MEDICAL REGISTRATION ACT, 1961 (KARNATAKA ACT 34 OF 1961)

**XXX XXX XXX**

**3. Establishment, incorporation and constitution of Council.—**

**XXX XXX XXX**

(2) The Council shall consist of the following fifteen members, namely:—

(a) six members to be elected from amongst themselves by the medical practitioners who are registered under this Act;

(b) four members to be elected from amongst themselves by the "teachers" and "teachers of the University" as defined in clauses (m) and (n) respectively of section 2 of the Rajiv Gandhi University of Health Sciences Act, 1994 (Karnataka Act 44 of 1994) and who are registered under this Act.

(c) four members to be nominated by the State Government from among registered practitioners.

**XXX XXX XXX**

**19. Renewal of registration.**—(1) Notwithstanding anything contained in section 13, each medical practitioner shall pay to the Medical Council a prescribed fee on or before such date as may be prescribed for the continuance of his name in the register.

Provided that the renewal of registration shall not be done unless the registered Medical Practitioner produces a certificate for having attended a Continuing Medical Education programme for not less than one hundred hours conducted by an organisation or institution recognised by the Medical Council.

(2) If the renewal fee is not paid before the due date, the Registrar shall remove the name of the defaulter from the register:

Provided that the name so removed may be re-entered in the register on payment of the renewal fee in such manner and subject to such conditions, as may be prescribed by rules.

**XXX XXX XXX**

Government Press, Vikasa Soudha Unit, Bengaluru 21st March, 2017 P7, W.D.1169, Copies 1000